
# ಪ್ರೀತಿ, ಸಹನೆಯ ಬದುಕಿನ ಪಯಣ

ಮರಾಠಿಯ ಪ್ರಸಿದ್ಧ ಕವಿ ನಾರಾಯಣ ಸುರ್ವೆ ಅವರ ಪತ್ನಿ ಕೃಷ್ಣಾಬಾಯಿ ಅವರು ತಮ್ಮ ಬದುಕಿನ ಬುತ್ತಿಯನ್ನು ಬಿಚ್ಚಿಟ್ಟ ಬರಹವಿದು. ಮರಾಠಿಯಲ್ಲಿ ಕೃಷ್ಣಾಬಾಯಿ ಸುರ್ವೆ ಅವರು ಬರೆದ ಆತ್ಮಕತೆ 'ಮಾಸ್ತರಾಂಚಿ ತಾವಲಿ'ಯನ್ನು 'ಮಾಸ್ತರರ ನೆರಳಾಗಿ' ಎಂಬ ಹೆಸರಿನಲ್ಲಿ ಪ್ರಭಾಕರ ಸಾತಖೇಡ ಮನಮುಟ್ಟುವಂತೆ ಕನ್ನಡಕ್ಕೆ ತಂದಿದ್ದಾರೆ.

ಬಡ ಕಾರ್ಮಿಕ ದಂಪತಿಯ ಅನಾಥ ಮಗಳಾಗಿ, ಪ್ರಸಿದ್ಧ ಬರಹಗಾರನ ಬಡ ಹೆಂಡತಿಯಾಗಿ ಬೆಳೆದು ಬಂದ ಕೃಷ್ಣಾಬಾಯಿ ಅವರ ಕಥಾನಕ ಇಲ್ಲಿ ಕಾಡಿನಂತೆ ದಟ್ಟವಾಗಿ ಹಬ್ಬಿ ನಿಂತಿದೆ. ಮಹಾನಗರ ಮುಂಬಯಿಯಲ್ಲಿ, ನೇರಳದಂಥ ಸಣ್ಣ ಗ್ರಾಮದಲ್ಲಿ, ಏಕಾಂತದಲ್ಲಿ, ಗದ್ದಲದಲ್ಲಿ, ಪತಿಯ ಒಡನಾಟದಲ್ಲಿ, ಮನೆಗೆ ಬರುವ ಅತಿಥಿ ಅಭ್ಯಾಗತರ ಜೊತೆಯಲ್ಲಿ ಹಂಚಿಕೊಂಡ ಬದುಕಿನ ಸಿಹಿಕಹಿಗಳು ಯಾವುದೇ ಹಮ್ಮು ಬಿಮ್ಮುಗಳಿಲ್ಲದೆ ಪದರು ಪದರಾಗಿ ಇಲ್ಲಿ ತೆರೆದುಕೊಂಡಿವೆ. ಅವರ ಆತ್ಮದ ಬೆಳಕು ಪ್ರತಿಪುಟದಲ್ಲೂ ಮಿಂಚುತ್ತದೆ, ಆವರಿಸುತ್ತದೆ. ಅದರ ಓದು ನಮ್ಮೊಳಗನ್ನು ಬೆಳೆಸುತ್ತದೆ, ಬೆಳಗುತ್ತದೆ. ನಿಸ್ವಾರ್ಥ, ಪ್ರಾಮಾಣಿಕತೆ, ಜೀವನ ಪ್ರೀತಿಗಳೇ ಅವರ ಬದುಕಿನ ಕಡುದುಃಖದ ಕತ್ತಲದಾರಿಯನ್ನು ಯಾವುದೇ ನಂಜಿಲ್ಲದೆ, ಕಹಿಗೆ ಎಡೆ ಕೊಡದಂತೆ ದಾಟಲು ನೆರವು ನೀಡಿವೆ. ಬದುಕಿನ ಪಯಣಕ್ಕೆ ಏನು ಬೇಕು? ಎಂದು ಚಿಂತಿಸುವವರು ಒಮ್ಮೆ ಕೃಷ್ಣಾಬಾಯಿ ಅವರ ಈ ಜೀವನ ಕಥನ ಓದಬೇಕು. ಪ್ರೀತಿ, ಸಹನೆಯಲ್ಲದೆ ಬೇರೇನೂ ಬೇಡ ಎನ್ನುತ್ತದೆ ಇಲ್ಲಿನ ಮಾಗಿದ ಜೀವ. ಈ ತಾಯಿಯ ಜೀವನ ಚೈತನ್ಯದ ಮೂಲ ಸೆಲೆಗಳಿವು.



ಮಾಸ್ತರರ ನೆರಳಾಗಿ
(ಕೃಷ್ಣಾಬಾಯಿ ನಾರಾಯಣ ಸುರ್ವೆ ಆತ್ಮಕತೆ)
ಕನ್ನಡಕ್ಕೆ: ಪ್ರಭಾಕರ ಸಾತಖೇಡ
ಪ್ರ: ರಂಗಪ್ರೇಮ, ಬನಶಂಕರಿ ಬಡಾವಣೆ, ಬ್ರಹ್ಮಪುರ, ಕಲಬುರ್ಗಿ

ಪ್ರಸಿದ್ಧ ಕವಿ ನಾರಾಯಣ ಸುರ್ವೆ ಅವರ ಕವಿತೆಗಳಂತೆಯೇ ಕೃಷ್ಣಾಬಾಯಿ ಸುರ್ವೆ ಅವರು ತಮ್ಮ ಬದುಕಿನ ಘನವಾದ ಮತ್ತು ಅಷ್ಟೇ ಉಜ್ವಲವಾದ ಕಾವ್ಯವನ್ನು ಇಲ್ಲಿ ಬರೆದಿದ್ದಾರೆ. ಮತ್ತು ಮನುಷ್ಯ ಅಂತಃಕರಣವೇ ಮುಖ್ಯವಾಗಿರುವ ಬದುಕನ್ನು ಅವರು ಜೀವಿಸಿದ್ದೂ ಈ ಪುಟಗಳಲ್ಲಿ ದಾಖಲಾಗಿದೆ. ಇಂಥ ಘನವಾದ ಬದುಕನ್ನು ರಂಗತಜ್ಞ ಪ್ರಭಾಕರ ಸಾತಖೇಡ ಅವರು ಅಷ್ಟೇ ಪ್ರೀತಿ ಮತ್ತು ಕಾಳಜಿಯಿಂದ, ಮೂಲದ ಭಾವಕ್ಕೆ ಮುಕ್ಕಾಗದಂತೆ ಕನ್ನಡಕ್ಕೆ ತಂದಿದ್ದಾರೆ. ಕೃಷ್ಣಾಬಾಯಿ ಅವರ ಅನುಭವಗಳ ಆರ್ದ್ರತೆಗೆ ಧಕ್ಕೆಯಾಗದಂತೆ ಮಾಡಿರುವ ಈ ಕನ್ನಡದ ಅನುವಾದ ಓದುಗರಿಗೆ ಆಪ್ತವಾದ ಅನುಭವ ನೀಡುತ್ತದೆ. ಕನ್ನಡಕ್ಕೆ ಅನುವಾದಗೊಂಡ ಮರಾಠೀ ಆತ್ಮಕತೆಗಳ ಸಾಲಿನಲ್ಲಿ ಇದು ನಿಸ್ಸಂದೇಹವಾಗಿ ಭಿನ್ನವಾಗಿ ನಿಲ್ಲುತ್ತದೆ.

● **ವಿಕ್ರಮ ವಿಸಾಜಿ**